ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 06-04-1995.

# *ಪವಿತ್ರತೆಯ ಅತ್ಮಿಕ ವ್ಯಕ್ತಿತ್ವದ ಸ್ಮೃತಿ ಸ್ವರೂಪದ ಮೂಲಕ ಮಾಯಾಜೀತ್‌ರಾಗಿ.*

(‘सेवाओं के साथ-साथ बेहद की वैराग्य वृत्ति द्वारा पुराने वा व्यर्थ संस्कारों से मुक्त बनो’’)

ಇಂದು ಸ್ನೇಹದ ಸಾಗರ ಬಾಪ್‌ದಾದಾರವರು ನಾಲ್ಕೂಕಡೆಯ ಸರ್ವ ಸ್ನೇಹಿ ಮಕ್ಕಳನ್ನು ನೋಡುತ್ತಿದ್ದರು. ಪ್ರತಿಯೊಬ್ಬ ಸ್ನೇಹಿ ಮಕ್ಕಳ ಮುಖದಲ್ಲಿ ಆತ್ಮಿಕ ವ್ಯಕ್ತಿತ್ವದ ಹೊಳಪನ್ನು ನೋಡುತ್ತಿದ್ದಾರೆ. ಹೊರ ರೂಪದಲ್ಲಿ ಸಾಧಾರಣ ವ್ಯಕ್ತಿತ್ವದವರಾಗಿದ್ದಾರೆ ಆದರೆ ಆತ್ಮಿಕ ವ್ಯಕ್ತಿತ್ವದಲ್ಲಿ ಎಲ್ಲರಿಗಿಂತ ನಂಬರ್‌ವನ್ ಆಗಿದ್ದಾರೆ. ಪ್ರಪಂಚದಲ್ಲಿ ಅನೇಕ ಪ್ರಕಾರದ ವ್ಯಕ್ತಿತ್ವಗಳ ಗಾಯನವಿದೆ. ಶರೀರದ ವ್ಯಕ್ತಿತ್ವ, ಯಾವುದೇ ವಿಶೇಷತೆಯ ವ್ಯಕ್ತಿತ್ವ ಮತ್ತು ಯಾವುದೇ ವಿಶೇಷ ಸ್ಥಾನದ ವ್ಯಕಿತ್ವ ಆದರೆ ನಿಮ್ಮೆಲ್ಲರ ಚಹರೆಯ ಮೇಲೆ, ಚಲನೆಯಲ್ಲಿ ಯಾವ ವ್ಯಕ್ತಿತ್ವವಿದೆ? ಪವಿತ್ರತೆಯ ವ್ಯಕ್ತಿತ್ವ. ಪವಿತ್ರತೆಯೇ ವ್ಯಕ್ತಿತ್ವವಾಗಿದೆ. ಯಾರೆಷ್ಟು ಪವಿತ್ರವಾಗಿದ್ದಾರೆಯೋ ಅಷ್ಟು ಅವರ ವ್ಯಕ್ತಿತ್ವ ಕೇವಲ ಕಾಣಿಸುವುದೇ ಅಲ್ಲ ಆದರೆ ಅನುಭವವಾಗುತ್ತಿರುತ್ತದೆ. ಎಲ್ಲರು ತಮ್ಮ ಆತ್ಮಿಕ ವ್ಯಕ್ತಿತ್ವವನ್ನು ಅನುಭವ ಮಾಡುತ್ತಿದ್ದೀರಾ? ನಿಮ್ಮಂತಹ ವ್ಯಕ್ತಿತ್ವ ಸತ್ಯಯುಗದಿಂದ ಇಲ್ಲಿಯವರೆಗೆ ಯಾರದಾದರು ಇದೆಯೇ? ಇಡೀ ಕಲ್ಪದಲ್ಲಿ ಹುಡುಕಿದರೂ ನಿಮ್ಮಂತಹ ವ್ಯಕ್ತಿತ್ವದವರಿದ್ದಾರೆಯೇ? ಇಲ್ಲವಲ್ಲವೇ. ಅಂದಾಗ ತಮಗೆ ತಮ್ಮ ಆತ್ಮಿಕ ವ್ಯಕ್ತಿತ್ವದ ನಶೆಯಿದೆ. ಅನಾದಿ ಕಾಲದಲ್ಲಂತು ಪರಮಧಾಮದಲ್ಲಿಯೂ ನೀವು ವಿಶೇಷ ಆತ್ಮರ ವ್ಯಕ್ತಿತ್ವ ಎಲ್ಲರಿಗಿಂತ ಶ್ರೇಷ್ಠವಾಗಿದೆ. ಭಲೇ ಆತ್ಮರೆಲ್ಲರೂ ಹೊಳೆಯುತ್ತಾರೆ ಆದರೆ ಆತ್ಮಿಕ ವ್ಯಕ್ತಿತ್ವದ ಆತ್ಮರಾದ ನಿಮ್ಮ ಹೊಳಪು ಅನ್ಯ ಎಲ್ಲಾ ಅತ್ಮರಿಗಿಂತ ಅತೀತ ಮತ್ತು ಪ್ರಿಯವಾಗಿದೆ. ತಮ್ಮ ಅನಾದಿ ಕಾಲದ ವ್ಯಕ್ತಿತ್ವದ ಸ್ಮೃತಿಯನ್ನು ತನ್ನಿರಿ. ಸ್ಮೃತಿಯಲ್ಲಿ ಬಂದಿತೇ? ನೋಡುತ್ತಿದ್ದೀರಾ? ಬಾಪ್‌ದಾದಾರವರೊಂದಿಗೆ ಎಂತಹ ಆತ್ಮಿಕ ವ್ಯಕ್ತಿತ್ವದಿಂದ ಕಾಣಿಸುತ್ತಿದ್ದೀರಿ. ನಿಮ್ಮನ್ನು ನೀವು ನೋಡಿಕೊಳ್ಳಬಲ್ಲಿರಾ? ಅನಾದಿಕಾಲಕ್ಕೆ ಹೋಗಿರಿ. ಎಷ್ಟು ಸಮಯದಲ್ಲಿ ಹೋಗಬಲ್ಲಿರಿ? ಹೋಗುವುದರಲ್ಲಿ ಎಷ್ಟು ಸಮಯ ಹಿಡಿಸುತ್ತದೆ? ಸೆಕೆಂಡ್ ಕ್ಕಿಂತ ಕಡಿಮೆಯಲ್ಲವೇ! ಒಂದು ದಿನ, ಒಂದು ಘಂಟೆ ಬೇಕೆ? ಸೆಕೆಂಡ್ ಗಿಂತಲೂ ಕಡಿಮೆ ಎಲ್ಲಿ ಬೇಕಾದರೂ ಅಲ್ಲಿ ತಲುಪಬಹುದು. ಅಂದಾಗ ಅನಾದಿ ಕಾಲದ ತಮ್ಮ ವ್ಯಕ್ತಿತ್ವವನ್ನು ನೋಡಿದ್ದೀರಾ? ಈಗ ಅನಾದಿ ಕಾಲದಿಂದ ಆದಿ ಕಾಲದಲ್ಲಿ ಬಂದುಬಿಡಿ. ಬಂದು ಬಿಟ್ಟಿದ್ದೀರಾ ಅಥವಾ ಈಗಲೂ ನಡೆಯುತ್ತಿದ್ದೀರಾ? ತಲುಪಿ ಬಿಟ್ಟಿದ್ದೀರಾ? ಅಂದಾಗ ಅನಾದಿ ಕಾಲದಿಂದ ಆದಿ ಕಾಲದಲ್ಲಿ ತಮ್ಮ ಆತ್ಮೀಕ ವ್ಯಕ್ತಿತ್ವವನ್ನು ನೋಡಿ ಎಷ್ಟು ಶ್ರೇಷ್ಠ ವ್ಯಕ್ತಿತ್ವವಾಗಿದೆ! ತನುವಿನ, ಮನಸ್ಸಿನ, ಧನದ ಮತ್ತು ಸಂಬಂಧದ ವ್ಯಕ್ತಿತ್ವವಿದೆ. ಎಲ್ಲಾ ಪ್ರಕಾರದ ವ್ಯಕ್ತಿತ್ವ ಎಷ್ಟು ಶ್ರೇಷ್ಠವಾಗಿದೆ. ನಂತರ ಆದಿಕಾಲದ ವ್ಯಕ್ತಿತ್ವವನ್ನು ನೋಡುತ್ತಿದ್ದೀರಾ? ಎಷ್ಟು ಸುಂದರವಾಗಿ ಕಾಣಿಸುತ್ತಿದ್ದೀರಿ. ಎಷ್ಟು ಶೃಂಗಾರಿತರಾಗಿದ್ದೀರಿ, ಎಷ್ಟು ಸುಖ, ಶಾಂತಿ, ಪ್ರೇಮ, ಆನಂದ ಸ್ವರೂಪವಾಗಿದ್ದೀರಿ. ಆದಿ

ಕಾಲದಲ್ಲಿಯೂ ತಮ್ಮ ವ್ಯಕ್ತಿತ್ವವನ್ನು ನೋಡಿಕೊಳ್ಳಿರಿ. ಸ್ಪಷ್ಟವಾಗಿ ಕಾಣಿಸುತ್ತದೆಯೇ ಅಥವಾ 5 ಸಾವಿರ ವರ್ಷವಾಗಿರುವ ಕಾರಣ ಸ್ವಲ್ಪ ಸ್ಪಷ್ಟವಾಗಿ ಕಾಣಿಸುತ್ತದೆಯೇ? ಎಲ್ಲರಿಗೆ ಸ್ಪಷ್ಟವಾಗಿದೆಯೇ? ಎಲ್ಲರೂ ಬುದ್ಧಿವಂತರಾಗಿದ್ದೀರಿ. ತಮ್ಮ ಆದಿ ಕಾಲವನ್ನು ನೋಡಿದ್ದೀರಿ. ಈಗ ಮಧ್ಯ ಕಾಲದಲ್ಲಿ ಬನ್ನಿ. ಮಧ್ಯಕಾಲದಲ್ಲಿಯೂ ತಮ್ಮ ವ್ಯಕ್ತಿತ್ವ ಏನಾಗಿದೆ? ತಮ್ಮ ಜಡಚಿತ್ರಕ್ಕೆ ಎಷ್ಟು ವಿಧಿಪೂರ್ವಕ ಪೂಜೆ ಮತ್ತು ಗಾಯನ ಮಾಡಲಾಗುತ್ತದೆ. ಭಲೇ ಎಷ್ಟೇ ಧರ್ಮಾತ್ಮಾ, ಮಹಾತ್ಮಾ, ನೇತರು ವ್ಯಕ್ತಿತ್ವದವರ ಗಾಯನ ಮಾಡಲಿ ಆದರೆ ತಮ್ಮ ಜಡ ಚಿತ್ರಗಳ ವ್ಯಕ್ತಿತ್ವದ ಮುಂದೆ ಅವರ ವ್ಯಕ್ತಿತ್ವ ಏನು ಇಲ್ಲ. ನಿಮ್ಮೆಲ್ಲರ ಪೂಜೆಯಂತೆ ಯಾವುದೇ ಮಹಾತ್ಮ ಅಥವಾ ನೇತರ, ಧರ್ಮಾತ್ಮರ ಪೂಜೆಯಾಗುತ್ತದೆಯೇ? ಎಂದಾದರು ನೋಡಿದ್ದೀರಾ? ತಮ್ಮ ಜಡ ಚಿತ್ರಗಳಿಗಿಂತಲೂ ಶೃಂಗಾರ ಯಾರದಾಗುತ್ತದೆ. ಅಂದಾಗ ಮಧ್ಯಕಾಲದಲ್ಲಿಯೂ ನೀವು ಆತ್ಮರ ಪವಿತ್ರತೆಯ ವ್ಯಕ್ತಿತ್ವ ಎಷ್ಟು ಶ್ರೇಷ್ಠವಾಗಿದೆ! ತಮ್ಮ ಚಿತ್ರವನ್ನು ನೋಡಿದ್ದೀರಾ? ತಮ್ಮ ಪೂಜೆಯಾಗುತ್ತದೆಯೇ ಇಲ್ಲವೇ? ಕೇವಲ ದೊಡ್ಡ-ದೊಡ್ಡವರದಾಗುತ್ತದೆ. ನಮ್ಮದಲ್ಲ! ಎಂದು ತಿಳಿಯುತ್ತೀರಾ. ಡಬಲ್ ವಿದೇಶಿಯರ ಮಂದಿರಗಳಿವೆಯೇ? ನೋಡಿದ್ದೀರಾ. ಅದರಲ್ಲಿ ತಮ್ಮ ಚಿತ್ರವಿದೆಯೇ? ಕೇಳಿದಾಗ ಇರಬಹುದೆಂದು ಹೇಳುತ್ತೀರೋ! ಸ್ಮೃತಿಯಲ್ಲಿದೆಯೇ? ಮಧ್ಯಕಾಲದಲ್ಲಿಯೂ ತಮ್ಮ ವ್ಯಕ್ತಿತ್ವ ಅತೀ ಶ್ರೇಷ್ಠವಾಗಿದೆ ಮತ್ತು ಈಗ ಅಂತಿಮ ಜನ್ಮದಲ್ಲಿ ಮರುಜೀವಾ ಬ್ರಾಹ್ಮಣ ಜನ್ಮವಿದೆ ಅದರ ವ್ಯಕ್ತಿತ್ವವನ್ನು ನೋಡಿ ಎಷ್ಟು ದೊಡ್ಡದಾಗಿದೆ. ಗಾಯನ ಎಷ್ಟಿದೆ - ಯಾವುದೇ ಶ್ರೇಷ್ಠ ಕಾರ್ಯವನ್ನು ಈಗಲೂ ನಿಮ್ಮ ನಾಮಧಾರಿ ಬ್ರಾಹ್ಮಣರೇ ಮಾಡುತ್ತಾರೆ. ಭಲೇ ಬ್ರಾಹ್ಮಣರು ಈಗ ಬ್ರಾಹ್ಮಣರಾಗಿಲ್ಲ ಆದರೆ ಹೆಸರಿನ ಬ್ರಾಹ್ಮಣರಿದ್ದಾರಲ್ಲವೇ! ನಿಮ್ಮ ಹೆಸರಿನಿಂದ ನಿಮ್ಮ ವ್ಯಕ್ತಿತ್ವದ ಕಾರಣ ಅವರನ್ನು ಶ್ರೇಷ್ಠರೆಂದು ಗಾಯನ ಮಾಡಲಾಗುತ್ತದೆ. ಅಂದಾಗ ಬ್ರಾಹ್ಮಣ ಜನ್ಮದ ವ್ಯಕ್ತಿತ್ವ ಎಷ್ಟು ಶ್ರೇಷ್ಠವಾಗಿದೆ! ಆದಿಕಾಲ, ಅನಾದಿ ಕಾಲ, ಮಧ್ಯ ಕಾಲ ಮತ್ತು ಈಗ ಅಂತ್ಯ ಕಾಲ - ಇಡೀ ಕಲ್ಪದಲ್ಲಿ ನಿಮ್ಮ ವ್ಯಕ್ತಿತ್ವ ಸದಾ ಮಹಾನ್‌ಆಗಿದೆ.

ಒಂದುವೇಳೆ ಲೌಕಿಕ ವ್ಯಕ್ತಿತ್ವದವರ ಹೆಸರು ಬಂದರೆ ಯಾವುದಾದರೂ ವಿಶೇಷ ಪುಸ್ತಕದಲ್ಲಿ ಅವರು ಇಂತಹ ವ್ಯಕ್ತಿ ಎಂದು ಬರೆಯುತ್ತಾರೆ. ಆದರೆ ನಿಮ್ಮ ಹೆಸರು ಯಾವುದರಲ್ಲಿರುತ್ತದೆ? ಸಾಧಾರಣ ಪುಸ್ತಕಗಳಲ್ಲಿ ಇರುವುದಿಲ್ಲ. ಶಾಸ್ತ್ರಗಳಲ್ಲಿ ಇರುತ್ತದೆ. ಅಧಿಕಾಲದಿಂದ ಯಾವ ಶಾಸ್ತ್ರಗಳು ತಯಾರಾಗಿವೆಯೋ ಅವುಗಳಲ್ಲಿ ಯಾರ ಚರಿತ್ರೆ ಇದೆ? ಯಾರ ಮಹಿಮೆ(ಗಾಯನ) ಇದೆ? ಯಾರ ಕಥೆಗಳು ಇವೆ? ಲೌಕಿಕ ವ್ಯಕ್ತಿತ್ವದವರ ಮಹಿಮೆ ವಿಶೇಷವಾಗಿ ಒಂದು ಪುಸ್ತಕದಲ್ಲಿ ಇರುತ್ತದೆ. ಆದರೆ ನಿಮ್ಮ ಮಹಿಮೆ ವಿಶೇಷವಾಗಿ ಶಾಸ್ತ್ರಗಳಲ್ಲಿ ಇರುತ್ತದೆ. ಹಾಗಾದರೆ ಶಾಸ್ತ್ರಗಳಿಗೆ ಎಷ್ಟು ಗೌರವ ಕೊಡುತ್ತಾರೆ ಬಹಳ ವಿಧಿಪೂರ್ವಕವಾಗಿ ಶಾಸ್ತ್ರಗಳನ್ನು ಸಂಭಾಲನೆ ಮಾಡುತ್ತಾರೆ. ಅವುಗಳನ್ನು ಕೂಡ ಶ್ರೇಷ್ಠವಾದ ಪೂಜ್ಯ ರೂಪದಿಂದ ನೋಡುತ್ತಾರೆ. ಸತ್ಯ ಭಕ್ತರು ಶಾಸ್ತ್ರಗಳನ್ನು ವಿಧಿಪೂರ್ವಕವಾಗಿ ಇಟ್ಟುಕೊಳ್ಳುತ್ತಾರೆ ಮತ್ತು ಓದುತ್ತಾರೆ ಕೂಡ. ಸಾಧಾರಣ ಪುಸ್ತಕಗಳಂತೆ ಇಡುವುದಿಲ್ಲ. ಆದ್ದರಿಂದ ನಿಮ್ಮ ಪವಿತ್ರತೆಯ ವ್ಯಕ್ತಿತ್ವವನ್ನು ಸದಾ ಪ್ರತ್ಯಕ್ಷ ರೂಪದಲ್ಲಿ ಸದಾ ಸ್ಮೃತಿ ಇಟ್ಟುಕೊಳ್ಳಿರಿ. ತಿಳಿದಿದೆ...ಅಥವಾ ನಾವೇ... ಹೀಗೆ ಗುಪ್ತವಾಗಿ ಇಡಬೇಡಿರಿ. ಸ್ಮೃತಿ ಸ್ವರೂಪದಲ್ಲಿ ಇಟ್ಟುಕೊಳ್ಳಿರಿ. ಎಷ್ಟು ಜನರ ಬುದ್ಧಿಯಲ್ಲಿ ಇದು ಪ್ರತ್ಯಕ್ಷ ರೂಪದಲ್ಲಿ ಸ್ಮೃತಿ ಇರುತ್ತದೆಯೋ ಆ ಸ್ಮೃತಿ ಸಮರ್ಥತೆಗೆ ಆಧಾರ. ಎಲ್ಲಿ ಸಮರ್ಥತೆ ಇರುತ್ತದೆಯೋ ಅಲ್ಲಿ ಮಾಯೆ ಬರಬಲ್ಲದೇ? ಸಮರ್ಥ ಆತ್ಮನ ಬಳಿ ಮಾಯೆ ಬರುವುದು ಅಸಂಭವ. ಪರಿಶ್ರಮ ಪಡುವ

ಅವಶ್ಯಕತೆಯಿಲ್ಲ. ಮಾಯೆಯ ಕೆಲಸವಾಗಿದೆ ಬರುವುದು ಆದರೆ ತಮ್ಮ ಕೆಲಸವಾಗಿದೆ ಈಗ ಸಮಯ ಪ್ರಮಾಣ ಓಡಿಸಬಾರದು. ಮಾಯೆಯು ಬಂದಿತು ಮತ್ತು ಓಡಿಸಿದೆವು ಎಂಬಂತೆ ಅಲ್ಲ. ನಿಮ್ಮ ಕೆಲಸವಾಗಿದೆ ಸದಾ ಮಾಯಾಜೀತ್ ಆಗಿರುವುದು. ಅಂದಾಗ ಮಾಯಾಜೀತ್ ಆಗಿದ್ದೀರಾ ಅಥವಾ ಮಾಯೆಯನ್ನು ಪದೇ ಪದೇ ಓಡಿಸುವಂತಹವರಾಗಿದ್ದೀರಾ? ಈಗ ಇನ್ನೂ ಓಡಿಸ ಬೇಕಾಗುತ್ತದೆಯೇ?, ಸ್ವಲ್ಪ- ಸ್ವಲ್ಪ ಅದು ದರ್ಶನ ಕೊಡುವುದಕ್ಕೆ ಬಂದು ಬಿಡುತ್ತದೆಯೇ! ಇಲ್ಲವಲ್ಲವೇ! ಡಬಲ್ ವಿದೇಶಿಯರು ಮಾಯೆಯನ್ನು ಸದಾಕಾಲಕ್ಕೆ ಓಡಿಸಿದ್ದೀರಾ? ಅಥವಾ ಓಡಿಸುತ್ತಲೇ ಇರುತ್ತೀರಾ? ಹೇಗಿದ್ದೀರಿ? ಮಾಯೆಯು ಸದಾಕಾಲಕ್ಕೆ ಓಡಿ ಹೋಗಿತ್ತೇ? ಈಗ ಬರುವುದಿಲ್ಲವೇ? ಸ್ವಲ್ಪ-ಸ್ವಲ್ಪ ಬಂದರೂ ಪರವಾಗಿಲ್ಲವೇ? ಆದರು ಅರ್ಧ ಕಲ್ಪದ ಸ್ನೇಹವಾಗಿದೆಯಲ್ಲವೇ! ಅದನ್ನು ಹಾಗೆ ಬಿಟ್ಟುಬಿಡುತ್ತೀರಾ? ಬರುವುದೇ ಬೇಡ. ಹೇಳಿದೆವಲ್ಲವೇ ಸಮಯ ಸಮಾಪ್ತಿಯಾಗುವುದರ ಮೊದಲೇ ಬಹಳ ಸಮಯದಿಂದ ಮಾಯಾಜೀತ್‌ರಾಗುವ ಅಭ್ಯಾಸ ಬೇಕು. ಅಂತಿಮದಲ್ಲಿ ಆಗಲು ಸಾಧ್ಯವಿಲ್ಲ. ಒಂದುವೇಳೆ ಅಂತ್ಯದಲ್ಲಿ ಮಾಯಾಜೀತ್‌ಆಗುವ ಪುರುಷಾರ್ಥ ಮಾಡಿದರೂ ಏನಾಗುವುದು? ಬಾಪ್‌ದಾದಾರವರು ಗಿಳಿಯ ಕಥೆಯನ್ನು ಹೇಳುತ್ತಾರಲ್ಲವೇ ಗಿಳಿಗೆ ಹೇಳುತ್ತಾರೆ ನಳದ ಮೇಲೆ ಕುಳಿತುಕೊಳ್ಳಬೇಡ ಎಂದು, ಆದರೆ ಅದು ನಳದ ಮೇಲೆಯೇ ಕುಳಿತು ಅದೇ ಮಾತನ್ನು ಮತ್ತೆಮಹೇಳುತ್ತಿತ್ತು. ಇದೆ ರೀತಿ ಅಂತ್ಯ ಕಾಲದಲ್ಲಿ ಒಂದುವೇಳೆ ಬಹಳ ಸಮಯದ ಅಭ್ಯಾಸವಿಲ್ಲವೆಂದರೆ ಮನಸ್ಸಿನಲ್ಲಿ ಯೋಚಿಸುತ್ತೀರಿ ನಾನು ಆತ್ಮನಾಗಿದ್ದೇನೆ. ನಾನು ಆತ್ಮನಾಗಿದ್ದೇನೆ. ಎಂದು ಆದರೆ ಮಾಯೆಯ ಪ್ರಭಾವವು ಆಗುತ್ತಿರುತ್ತದೆ. ಮತ್ತೆ ನಾನು ಆತ್ಮನಾಗಿದ್ದೇನೆ. ನಾನು ಆತ್ಮನಾಗಿದ್ದೇನೆ ಎಂದು ಪ್ರಯುತ್ನವು ಮಡುತ್ತೀರಿ ಆದರೆ ಆಗುವುದಿಲ್ಲ. ಅದಕ್ಕೇ ಏನು ಮಾಡಬೇಕು? ಈಗಿನಿಂದಲೇ ಮಾಯಾಜೀತ್‌ರಾಗುವ ಅಭ್ಯಾಸ ಮಾಡಿ. ಮತ್ತು ಅದಕ್ಕೆ ಸಹಜ ಸಾಧನವಾಗಿದೆ ತಮ್ಮ ಆತ್ಮಿಕ ವ್ಯಕ್ತಿತ್ವವನ್ನು ಸ್ಮೃತಿಯಲ್ಲಿಟ್ಟುಕೊಳ್ಳಿರಿ. ವ್ಯಕ್ತಿತ್ವದವರ ಲಕ್ಷಣ ಏನಾಗಿದೆ? ಶ್ರೇಷ್ಠ ವ್ಯಕ್ತಿತ್ವದವರ ದೃಷ್ಟಿ ಎಲ್ಲಿಯೂ, ಯಾರಲ್ಲಿಯೂ ಹೋಗುವುದಿಲ್ಲ. ಇವರು ಹೀಗಿದ್ದಾರೆ, ಇವರು ಹೀಗೆ ಮಾಡುತ್ತಾರೆ, ಇವರು ಹೀಗೆ ಮಾಡುತ್ತಾರೆ, ನಾನು ಏಕೆ ಮಾಡಬಾರದು, ನಾನು ಏಕೆ ಮಾಡಲು ಸಾಧ್ಯವಿಲ್ಲ... ಹೀಗೆ ಬೇರೆಯವರ ಪ್ರಾಪ್ತಿಯಲ್ಲಿ ದೃಷ್ಟಿ ಹೋಗುವುದಿಲ್ಲ. ಏಕೆ? ಆತ್ಮಿಕ ವ್ಯಕ್ತಿತ್ವ ಉಳ್ಳವರು ಸರ್ವ ಪ್ರಾಪ್ತಿಗಳಿಂದ ಸಂಪನ್ನರಾಗಿದ್ದಾರೆ. ಸ್ವಭಾವದಲ್ಲಿಯೂ ಸಂಪನ್ನ, ಸಂಸ್ಕಾರದಲ್ಲಿಯೂ ಸಂಪನ್ನ, ಸಂಬಂಧದಲ್ಲಿಯೂ ಸಂಪನ್ನ, ಅವರು ಎಂದೂ ತಮ್ಮ ಪ್ರಾಪ್ತಿಗಳ ಭಂಡಾರದಲ್ಲಿ ಯಾವುದೇ ಅಪ್ರಾಪ್ತಿಯ ಅನುಭವವೇ ಮಾಡುವುದಿಲ್ಲ. ಏಕೆ? ಆತ್ಮಿಕ ವ್ಯಕ್ತಿತ್ವದ ಕಾರಣ ಅವರು ಸದಾ ಮನಸ್ಸಿನಿಂದ ಸಂಪನ್ನರಾಗುವ ಕಾರಣ ಸಂತುಷ್ಟರಾಗಿರುತ್ತಾರೆ. ಸ್ವಯಂನಲ್ಲಿ ಅಪ್ರಾಪ್ತಿಯ ಅನುಭವ ಮಾಡಿಕೊಂಡಾಗ ಇತರರ ಪ್ರಾಪ್ತಿಯ ಕಡೆ ದೃಷ್ಟಿ ಹೋಗುತ್ತದೆ. ಯಾವುದಾದರೂ ಅಪ್ರಾಪ್ತಿ ಇದೆಯೇ? ಯಾವ ಹಾಡನ್ನು ಹಾಡುತ್ತೀರಿ? ಬ್ರಾಹ್ಮಣರ ಖಜಾನೆಯಲ್ಲಿ ಅಪ್ರಾಪ್ತಿಯ ಯಾವುದೇ ವಸ್ತು ಇಲ್ಲ ಎಂದು. ಈ ಹಾಡು ಬಾಯಿಂದಲ್ಲ ಮನಸ್ಸಿನಿಂದ ಹಾಡುತ್ತಿರುವಿರಲ್ಲವೇ? ಯಾರು ಹಾಡುತಿದ್ದಿರೋ ಅವರು ಕೈಯನ್ನು ಎತ್ತಿರಿ, ಡಬಲ್ ವಿದೇಶಿಯರು ಕೂಡ ಹಾಡುತ್ತಿದ್ದೀರಲ್ಲವೇ ಒಳ್ಳೆಯದು.

ಬಾಪ್‌ದಾದಾರವರು ಇಂದು ನಾಲ್ಕಾರು ಕಡೆಯ ಮಕ್ಕಳ ಪವಿತ್ರತೆಯ ವ್ಯಕ್ತಿತ್ವವನ್ನು ಪರಿಶೀಲಿಸುತ್ತಿದ್ದಾರೆ. ಪವಿತ್ರತೆಯ ಪರಿಭಾಷೆಯನ್ನು ಒಳ್ಳೆಯ ರೀತಿಯಲ್ಲಿ ತಿಳಿದುಕೊಂಡಿದ್ದೀರಿ. ಪವಿತ್ರತೆ ಕೇವಲ ಬ್ರಹ್ಮಚರ್ಯ ವ್ರತವಲ್ಲ.

ಬ್ರಹ್ಮಚರ್ಯದಲ್ಲಿ ಇತ್ತಿಚೆಗಿನ ಪರಿಸ್ಥಿತಿಯ ಅನುಸಾರ ಕೆಲವು ಅಜ್ಞಾನಿ ಆತ್ಮರೂ ಕೂಡ ಪಾಲಿಸುತ್ತಿದ್ದಾರೆ. ಅವರಲ್ಲಿ ಜ್ಞಾನವಿದ್ದು ಅಲ್ಲ ಪರಿಸ್ಥಿತಿಗಳನ್ನು ನೋಡಿ ಪಾಲಿಸುತ್ತಿದ್ದಾರೆ. ಕೆಲವರು ಭಕ್ತರು ಕೂಡ ಇರುತ್ತಿದ್ದಾರೆ. ಅದೇನೋ ದೊಡ್ಡ ವಿಷಯವಲ್ಲ ಆದರೆ ಪವಿತ್ರತೆಯನ್ನು ದಿನವಿಡೀ ಪರಿಶೀಲಿಸಿಕೊಳ್ಳಿರಿ. ಪವಿತ್ರತೆಯ ಲಕ್ಷಣವಾಗಿದೆ ಸ್ವಚ್ಛತೆ, ಸತ್ಯತೆ. ಒಂದುವೇಳೆ ಇಡೀ ದಿನದಲ್ಲಿ ಭಲೇ ಏಳುವುದರಲ್ಲಿ, ಕುಳಿತುಕೊಳ್ಳುವುದರಲ್ಲಿ, ಮಾತನಾಡುವುದರಲ್ಲಿ, ಸೇವೆ ಮಾಡುವುದರಲ್ಲಿ, ಸ್ಥೂಲ ಸೇವೆಯ ಅಥವಾ ಸೂಕ್ಷ್ಮ ಸೇವೆಯಾಗಲಿ ವಿಧಿಪೂರ್ವಕವಿಲ್ಲದಿದ್ದರೆ ಅರ್ಥಾತ್ ವಿಧಿಯಲ್ಲಿಯೂ ಒಂದುವೇಳೆ ಸ್ವಲ್ಪ ಅಂತರವಿದ್ದರೆ ಅದು ಸ್ವಚ್ಛತೆ ಅರ್ಥಾತ್ ಪವಿತ್ರತೆಯಲ್ಲ. ವ್ಯರ್ಥ ಸಂಕಲ್ಪವೂ ಅಪವಿತ್ರತೆಯಾಗಿದೆ. ಏಕೆ? ನೀವು ಯೋಚಿಸುತ್ತೀರಿ ನಾವಂತು ಪಾಪವನ್ನು ಮಾಡಿಲ್ಲ. ಯಾರಿಗೂ ದುಃಖವನ್ನು ಕೊಟ್ಟಿಲ್ಲ ಎಂದು ಆದರೆ ಒಂದುವೇಳೆ ವ್ಯರ್ಥವಾಗಿ ನಡೆದುಕೊಂಡಿದ್ದೀರಿ, ಸಮಯವನ್ನು ಕಳೆದುಕೊಂಡಿದ್ದೀರಿ, ಸಂಕಲ್ಪಗಳು ವ್ಯರ್ಥವಾಗಿ ಹೋಗಿಬಿಟ್ಟಿವೆ, ಸಂತುಷ್ಟತೆ ಇಲ್ಲ ಎಂದರೆ ನಿಮ್ಮ ಪವಿತ್ರತೆಯ ಅಂತಿಮ ಸ್ಥಿತಿಯ ಡಿಗ್ರಿಯಲ್ಲಿ ಅಂತರ ಬಂದುಬಿಡುತ್ತದೆ. 16 ಕಲಾ ಸಂಪೂರ್ಣರಾಗಲು ಸಾಧ್ಯವಿಲ್ಲ. 15 ಕಲೆಯವರಾಗಿ, 14 ಕಲೆಯವರಾಗಿ, 15 1/2 ಕಲೆಯವರಾಗಿ ನಂಬವಾರ್ ಆಗಿ ಬಿಡುವುದು. ಅಂದಾಗ ಅಪವಿತ್ರತೆ ಎಂದರೆ ಕೇವಲ ಯಾರಿಗಾದರೂ ದುಃಖ ಕೊಡುವುದು ಅಥವಾ ಪಾಪ ಕರ್ಮ ಮಾಡುವುದಲ್ಲ ಆದರೆ ಸ್ವಯಂನಲ್ಲಿ ಸತ್ಯತೆ, ಸ್ವಚ್ಛತೆಯನ್ನು ಒಂದುವೇಳೆ ವಿಧಿಪೂರ್ವಕವಾಗಿ ಅನುಭವ ಮಾಡಿದರೆ ಪವಿತ್ರವಾಗಿದ್ದಂತೆ. ಮಾತು ಹೊರಬಂತು, ಹೇಳಬಾರದಾಗಿತ್ತು ಆದರೆ ಹೇಳಿಬಿಟ್ಟೆವು. ಅಂದಾಗ ಇದನ್ನು ಏನೆಂದು ಹೇಳುವಿರಿ? ಮಾಲೀಕರಾದಂತೆಯೇ? ಇದಕ್ಕಾಗಿ ಅಮೃತವೇಳೆಯಿಂದ ಹಿಡಿದು ರಾತ್ರಿಯವರೆಗೆ ತಮ್ಮ ಸಂಕಲ್ಪ, ಮಾತು, ಕರ್ಮ, ಸೇವೆ ಎಲ್ಲವನ್ನು ಪರಿಶೀಲನೆ ಮಾಡಿರಿ. ದೊಡ್ಡ ರೂಪದಿಂದ ಪರಿಶೀಲನೆ ಮಾಡಬೇಡಿ. ಒಂದುವೇಳೆ ಮೇಲೆ-ಮೇಲೆ ಸ್ಥೂಲ ರೂಪದಿಂದ ಪರಿಶೀಲನೆ ಮಾಡಿದರೆ ನೋಡಿ ಚಂದ್ರವಂಶಿಯ ದೊಡ್ಡ ಲಕ್ಷಣ ಬಿಲ್ಲು-ಬಾಣವನ್ನು ಕೊಟ್ಟಿದ್ದಾರೆ ಮತ್ತು ಸೂರ್ಯವಂಶಿಯರಿಗೆ ಎಷ್ಟು ಚಿಕ್ಕ ಮುರಳಿ ಕೊಟ್ಟು ಬಿಟ್ಟಿದ್ದಾರೆ. ಮುರಳಿ ಎಷ್ಟು ಹಗುರವಾಗಿದೆ. ಮತ್ತು ಬಿಲ್ಲು-ಬಾಣ ಎಷ್ಟು ಪರಿಶ್ರಮದ್ದಾಗಿದೆ. ಬಾರವನ್ನು ಹೊತ್ತುಕೊಂಡು ಗುರಿಯನ್ನು ಇಡಬೇಕಾಗುತ್ತದೆ. ಮುರಳಿಯನ್ನು ನೋಡಿ ಅದರಿಂದ ನಾಟ್ಯ ಮಾಡಿ, ಹಾಡಿರಿ, ನಗಿ, ಆಟ ಆಡಿರಿ. ಅಂದಾಗ ಇದಕ್ಕಾಗಿ ದೊಡ್ಡ - ದೊಡ್ಡ ರೂಪದಿಂದ ಪುರುಷಾರ್ಥವನ್ನು ಇಟ್ಟುಕೊಳ್ಳಬೇಡಿ, ಮೇಲ್ನೋಟದ ಪರಿಶೀಲನೆ ಇಟ್ಟುಕೊಳ್ಳಬೇಡಿ. ಈಗ ಸೂಕ್ಷ್ಮ ಬುದ್ಧಿಯವರಾಗಿ ಏಕೆಂದರೆ ಸಮಯದ ಸಮಾಪ್ತಿ ಅಚಾನಕ್ಕಾಗಿ ಹೋಗುವುದಾಗಿದೆ. ಹೇಳಿ ಆಗುವುದಿಲ್ಲ. ಬಾಪ್‌ದಾದಾರವರಂತು ಮೊದಲೇ ಹೇಳಿದ್ದಾರೆ ಯಾವುದೇ ದೂರು ಕೊಡಬಾರದು – ಬಾಬಾ, ನೀವು ಏಕೆ ಹೇಳಿಲ್ಲ? ತಂದೆಯು ಎಂದೂ ಸಮಯದ ಅಭಿಮಾನಿಯಂತೆ ತಯಾರು ಮಾಡುವುದಿಲ್ಲ. ಈಗಲೇ ಪೂರ್ಣ ಡೈಮಂಡ್ (ವಜ್ರ) ಆಗಬೇಕು. ಇದನ್ನು ಪ್ರಾಮಿಸ್ ಮಾಡಿದರಲ್ಲವೇ? ಡೈಮಂಡ್ ಜುಬಿಲಿ ಆಚರಿಸುತ್ತಿದ್ದೀರಾ ಅಥವಾ ಡೈಮಂಡ್ ಆಗುವಿರಾ? ಏನು ಮಾಡುವಿರಿ? ಆಗಬೇಕಾ ಅಥವಾ ಆಚರಿಸಬೇಕಾ. ಎರಡು ಜೊತೆ-ಜೊತೆ ಮಾಡಬೇಕು. ಬಾಪ್‌ದಾದಾರವರು ಮುಂದಿನ ವರ್ಷದಲ್ಲಿ ಪರಿಶೀಲನೆ ಮಾಡಿ - ಪ್ರಾಮಿಸ್‌ನ್ನು ನಿಭಾಯಿಸಿದ್ದೀರಾ ಅಥವಾ ಕೇವಲ ಮುಖವನ್ನು ಮಧುರ ಮಾಡಿಕೊಂಡಿದ್ದೀರಾ? ಯಾರಾಗಿದ್ದೀರಿ? ಕೇವಲ ಹೇಳುವವರಾಗಿದ್ದೀರಾ ಅಥವಾ ನಿಭಾಯಿಸುವಂತಹರಾಗಿದ್ದೀರಾ? ಒಳ್ಳೆಯದು! ನೋಡಿ. ಟಿ.ವಿ. ಯಲ್ಲಿ ನೀಮ್ಮೆಲ್ಲರ ಫೋಟೊ ಬರುತ್ತಿದೆ. ನಂತರ

ಬದಲಾಗಬೇಡಿ - ನಾನಿರಲಿಲ್ಲ. ನಾನು ಹೇಳಿಲ್ಲ! ಆಗುವುದಂತು ಒಳ್ಳೆಯದಲ್ಲವೇ, ಯಾವುದೇ ಒಳ್ಳೆಯ ಮಾತನ್ನು ಬೇಗ ಮಾಡಬೇಕೇ ಅಥವಾ ತಡವಾಗಿ ಮಾಡಬೇಕಾ? ಬೇಗ ಮಾಡಬೇಕಲ್ಲವೇ!

ಸೆಕೆಂಡಿನಲ್ಲಿ ಎವರರೆಡಿ ಆಗಬಹುದೇ? ಸೆಕೆಂಡಿನಲ್ಲಿ ಅಶರೀರಿಯಾಗಬಹುದೇ? ಅಥವಾ ಯುದ್ಧ ಮಾಡಬೇಕಾಗುತ್ತದೆಯೇ, ನಾನು ಶರೀರವಲ್ಲ, ನಾನು ಶರೀರವಲ್ಲ.... ಈ ರೀತಿಯಿಲ್ಲವೇ! ಯೋಚಿಸಿದೆವು ಮತ್ತು ಆಯಿತು. ಯೋಚಿಸುವುದು ಮತ್ತು ಸ್ಥಿತರಾಗುವುದು. (ಬಾಪ್ ದಾದಾರವರು ಕೆಲವು ನಿಮಿಷಗಳವರೆಗೆ ಡ್ರಿಲ್ ಮಾಡಿಸಿದರು) ಚೆನ್ನಾಗೆನಿಸುತ್ತದೆಯೇ! ಅಂದಾಗ ಇಡೀ ದಿನದಲ್ಲಿ ಮಧ್ಯ-ಮಧ್ಯದಲ್ಲಿ ಇದನ್ನು ಅಭ್ಯಾಸ ಮಾಡಿ. ಎಷ್ಟೇ ಬ್ಯುಜಿಯಾಗಿರಿ ಆದರೆ ಮಧ್ಯ ಮಧ್ಯದಲ್ಲಿ ಒಂದು ಸೆಕೆಂಡ್ ಸಹ ಅಶರೀರಿಯಾಗುವ ಅಭ್ಯಾಸ ಅವಶ್ಯ ಮಾಡಿರಿ. ಇದಕ್ಕಾಗಿ ನಾನು ಬಿಜಿಯಾಗಿದ್ದೇನೆ ಎಂದು ಯಾರು ಹೇಳುವುದಿಲ್ಲ ತಾನೆ. ಒಂದು ಸೆಕೆಂಡನ್ನು ತೆಗೆಯಲೇಬೇಕು. ಅಭ್ಯಾಸ ಮಾಡಲೇಬೇಕು. ಒಂದುವೇಳೆ ಯಾರೊಂದಿಗಾದರೂ ಮಾತನಾಡುತ್ತಿದ್ದರೂ, ಕಾರ್ಯ ಮಾಡುತ್ತಿದ್ದರೂ, ಅವರಿಗೂ ಸಹ ಒಂದು ಸೆಕೆಂಡ್ ಈ ಡ್ರಿಲ್ ಮಾಡಿಸಿ. ಏಕೆಂದರೆ ಸಮಯ ಪ್ರಮಾಣ ಈ ಅಶರೀರಿತನದ ಅನುಭವ, ಈ ಅಭ್ಯಾಸ ಯಾರದು ಹೆಚ್ಚಾಗುತ್ತದೆಯೋ ಅವರು ಹೆಚ್ಚು ನಂಬರ್ ತೆಗೆದುಕೊಳ್ಳುವರು ಏಕೆಂದರೆ ಸಮಯದ ಸಮಾಪ್ತಿ ಅಚಾನಕ್ ಆಗುತ್ತದೆ ಎಂದು ಬಾಪ್‌ದಾದಾರವರು ತಿಳಿಸಿದ್ದರು. ಅಶರೀರಿಯಾಗುವ ಅಭ್ಯಾಸವಿದ್ದರೆ ತಕ್ಷಣ ಸಮಯದ ಸಮಾಪ್ತಿಯ ವೈಬ್ರೇಷನ್ ಬರುವುದು ಇದಕ್ಕಾಗಿ ಈಗಿನಿಂದಲೇ ಅಭ್ಯಾಸ ಹೆಚ್ಚಿಸಿಕೊಳ್ಳಿರಿ. ಮುಂದಿನ ವರ್ಷದಲ್ಲಿ ಡೈಮಂಡ್ ಜುಬಿಲಿಯಾಗಲಿದೆ ಅಂದಾಗ ಈಗ ಮಾಡಬಾರದು, ನಂತರ ಮಾಡುತ್ತೇವೆ ಎನ್ನಬಾರದು. ಎಷ್ಟು ಬಹಳ ಕಾಲ ಅಭ್ಯಾಸ ಮಾಡುವರೋ ಅಷ್ಟು ರಾಜ್ಯ ಭಾಗ್ಯದ ಪ್ರಾಪ್ತಿಯಲ್ಲಿ ನಂಬರ್ ಹೆಚ್ಚು ತೆಗೆದುಕೊಳ್ಳುವಿರಿ. ಒಂದುವೇಳೆ ಮಧ್ಯ- ಮಧ್ಯದಲ್ಲಿ ಈ ಅಭ್ಯಾಸ ಮಾಡಿದರೆ ಸ್ವತಃ ಶಕ್ತಿಶಾಲಿ ಸ್ಥಿತಿಯ ಸಹಜ ಅನುಭವ ಮಾಡುವಿರಿ. ಈ ಚಿಕ್ಕ-ಚಿಕ್ಕ ಮಾತುಗಳಲ್ಲಿ ಪುರುಷಾರ್ಥ ಮಾಡಬೇಕಾಗುತ್ತದೆ. ಆಗ ಅವೆಲ್ಲ ಸಹಜವಾಗಿ ಸಮಾಪ್ತಿಯಾಗಿ ಬಿಡುವವು. ಒಳ್ಳೆಯದು.

**ನಾಲ್ಕಾರು ಕಡೆಯ ಸರ್ವ ಆತ್ಮಿಕ ಪವಿತ್ರತೆಯ ವ್ಯಕ್ತಿತ್ವಉಳ್ಳ ವಿಶೇಷ ಆತ್ಮರಿಗೆ, ಸದಾ ಆದಿಯಿಂದ ಅಂತ್ಯದವರೆಗೆ ವ್ಯಕ್ತಿತ್ವದ ಹೊಳಪು ತೋರಿಸುವಂತಹ ಶ್ರೇಷ್ಠ ಆತ್ಮರಿಗೆ, ಸದಾ ಪವಿತ್ರತೆ, ಸ್ವಚ್ಛತೆಯ ಶಕ್ತಿಯಿಂದ ಸ್ವಯಂನ್ನು ಮತ್ತು ವಿಶ್ವವನ್ನು ಪರಿವರ್ತನೆ ಮಾಡುವಂತಹ ವಿಶ್ವ ಪರಿವರ್ತಕ ಆತ್ಮರಿಗೆ, ಸದಾ ನಿಮಿತ್ತ ಭಾವದಿಂದ ಸೇವಾಧಾರಿಗಳಾಗಿ ಪ್ರತ್ಯಕ್ಷಫಲದ ಅನುಭವ ಮಾಡುವಂತಹ ಅನುಭವೀ ಆತ್ಮರಿಗೆ ಬಾಪ್‌ದಾದಾರವರ ನೆನಪು-ಪ್ರೀತಿ ಮತ್ತು ನಮಸ್ತೆ.**

ರಿವೈಸ್ ಕೋರ್ಸ್ 06-04-1995.

***ಪವಿತ್ರತೆಯ ಆತ್ಮಿಕ ವ್ಯಕ್ತಿತ್ವದ ಸ್ಮೃತಿ ಸ್ವರೂಪದ ಮೂಲಕ ಮಾಯಾಜೀತ್‌ರಾಗಿ***

ಪವಿತ್ರತೆ ಎಂದರೆ ಕೇವಲ ಬ್ರಹ್ಮಚರ್ಯ ವ್ರತವೇ ಅಲ್ಲ. ಪವಿತ್ರತೆಯ ಲಕ್ಷಣ ಸ್ವಚ್ಛತೆ ಮತ್ತು ಸತ್ಯತೆ. ದಿನವಿಡೀ ಏಳುವುದರಲ್ಲಿ, ಕುಳಿತುಕೊಳ್ಳುವುದರಲ್ಲಿ, ಮಾತನಾಡುವುದರಲ್ಲಿ, ಸ್ಥೂಲ ಅಥವಾ ಸೂಕ್ಷ್ಮ ಸೇವೆಯಲ್ಲಿ,

ವಿಧಿಪೂರ್ವಕವಾಗಿರದಿದ್ದರೆ ಅದನ್ನು ಕೂಡ ಸ್ವಚ್ಛತೆ ಅಥವಾ ಪವಿತ್ರತೆ ಎಂದು ಕರೆಯುವುದಿಲ್ಲ ಅರ್ಥಾತ್ ನಿಮ್ಮ ಪವಿತ್ರತೆಯ ಅಂತಿಮ ಸ್ಥಿತಿಯ ಡಿಗ್ರಿಯಲ್ಲಿ ಅಂತರ ಬಂದುಬಿಡುತ್ತದೆ. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.

ನಾನು ಆತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಆತ್ಮಿಕ ವ್ಯಕ್ತಿತ್ವದ ಹೊಳಪಿನಿಂದ ನಂಬರ್ ವನ್ನಾಗಿ ಇರುವ ಪರಮಾತ್ಮನ ಸ್ನೇಹಿ ಮಗುವಾಗಿದ್ದೇನೆ.

2. ಪವಿತ್ರತೆಯ ವ್ಯಕ್ತಿತ್ವವಿರುವ ನನ್ನ ಹೊಳಪು ಅತೀತ ಮತ್ತು ಪ್ರಿಯವಾಗಿದೆ.

3. ನಾನು ಆದಿ ಕಾಲದ ಶ್ರೇಷ್ಠವಾದ ವ್ಯಕ್ತಿತ್ವಗಳಾದ ತನು, ಮನ, ಧನ ಮತ್ತು ಸಂಬಂಧಗಳು ಸ್ಪಷ್ಟವಾಗಿ ಕಾಣಿಸುತ್ತಿವೆ.

4. ನನ್ನ ಪವಿತ್ರತೆಯ ವ್ಯಕ್ತಿತ್ವದಿಂದ ನನಗೆ ಮಧ್ಯಕಾಲದಿಂದ (ದ್ವಾಪರದಿಂದ) ಕೂಡಾ ವಿಧಿಪೂರ್ವಕ ಪೂಜೆ ಮತ್ತು ಮಹಿಮೆ(ಗಾಯನ)ಯಾಗುತ್ತಿದೆ.

5. ಬ್ರಾಹ್ಮಣಾತ್ಮನಾದ ನನ್ನ ಜನ್ಮದ ವ್ಯಕ್ತಿತ್ವ ಆದಿಕಾಲ, ಅನಾದಿಕಾಲ, ಮಧ್ಯಕಾಲ ಮತ್ತು ಈಗ ಅಂತಿಮ ಕಾಲ ಅರ್ಥಾತ್ ಇಡೀ ಕಲ್ಪದಲ್ಲಿ ಮಹಾನ್ ಆಗಿ ಇದೆ.

6. ನನ್ನ ವ್ಯಕ್ತಿತ್ವದ ಹೆಸರು, ಚರಿತ್ರೆ, ಮಹಿಮೆ, ಕಥೆಗಳು ಶಾಸ್ತ್ರಗಳಲ್ಲಿ ಚಿತ್ರಿಕರಿಸಲಾಗಿದೆ.

7. ನಾನು ನನ್ನ ಪವಿತ್ರತೆಯ ವ್ಯಕ್ತಿತ್ವವನ್ನು ಸದಾ ಪ್ರತ್ಯಕ್ಷ ರೂಪದಲ್ಲಿ ಸ್ಮೃತಿಯಲ್ಲಿಟ್ಟುಕೊಂಡಿರುವ ಸಮರ್ಥ ಮತ್ತು ಮಾಯಾಜಿತ್ ಸ್ವರೂಪ.

8. ನಾನು ಸಮಯದ ಸಮಾಪ್ತಿಗೆ ಮೊದಲೇ ಬಹಳ ಕಾಲದ ಮಾಯಾಜಿತ್ ಆಗುವ ಅಭ್ಯಾಸ ಮಾಡಿದ್ದೇನೆ.

9. ನಾನು ಸರ್ವಪ್ರಾಪ್ತಿಗಳಿಂದ ಸಂಪನ್ನವಾಗಿ, ಸ್ವಭಾವದಲ್ಲಿ ಸಂಪನ್ನವಾಗಿ, ಸಂಸ್ಕಾರಗಳಲ್ಲಿ ಸಂಪನ್ನವಾಗಿ, ಸಂಬಂಧ ಸಂಪರ್ಕಗಳಲ್ಲಿ ಸಂಪನ್ನವಾಗಿ ಮನಸ್ಸಿನಿಂದ ಸಂತುಷ್ಟವಾಗಿ ಇರುವ ಆತ್ಮಿಕ ವ್ಯಕ್ತಿತ್ವದ ಮಗು ವಾಗಿದ್ದೇನೆ.

10. ನಾನು ದಿನವಿಡೀ ಸ್ವಚ್ಛತೆ ಮತ್ತು ಸತ್ಯತೆಯನ್ನು ಧಾರಣೆ ಮಾಡಿರುವ ಪವಿತ್ರ ಸ್ವರೂಪ.

11. ನಾನು ದಿನವಿಡೀ ಸೂಕ್ಷ್ಮವಾದ ಬುದ್ಧಿಯಿಂದ ನನ್ನ ಸಂಕಲ್ಪ, ಕರ್ಮ ಮತ್ತು ಸೇವೆ ಎಲ್ಲವನ್ನೂ ಪರಿಶೀಲಿಸಿಕೊಂಡಿರುವ ಸೂರ್ಯವಂಶಜನು.

12. ನಾನು ಬಹಳ ಕಾಲದ ಆಶರೀರಿ ಸ್ಥಿತಿಯನ್ನು ಅಭ್ಯಾಸ ಮಾಡಿ ಮೊದಲ ನಂಬರ್ ಪಡೆದಿದ್ದೇನೆ.

13. ನಾನು ಅಶರೀರಿ ಸ್ಥಿತಿಯ ಅಭ್ಯಾಸದಿಂದ ಸಮಾಪ್ತಿಯ ತರಂಗಗಳನ್ನು ಸಮೀಪ ತಂದಿರುವ ರಾಜ್ಯ ಭಾಗ್ಯದ ಪ್ರಾಪ್ತಿ ಸ್ವರೂಪ.

14. ನಾನು ಮಧ್ಯಮಧ್ಯದಲ್ಲಿ ಅಶರೀರಿ ಸ್ಥಿತಿಯನ್ನು ಅನುಭವ ಮಾಡಿ ಸ್ವತಹವಾಗಿ ಶಕ್ತಿಶಾಲಿ ಸ್ಥಿತಿಯನ್ನು ಸಹಜವಾಗಿ ಅನುಭವ ಮಾಡಿಕೊಂಡಿದ್ದೇನೆ.